**ಓ.ಎಸ್ ನಂ. 60/2018** **ಡಿ.ಡಬ್ಲ್ಯೂ-1**

**<u>ಸಾಕ್ಷಿಯನ್ನು ದಿನಾಂಕ 23.6.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಕೆ ವಕೀಲರಿಂದಃ</u>

ವಾದಿಯರು 1 ನೇ ಪ್ರತಿವಾದಿಯ ವಿರುದ್ಧ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ನನ್ನ ಮಾವನಾಗಬೇಕು. 2 ನೇ ಪ್ರತಿವಾದಿ ನನ್ನ ಯಜಮಾನ ಎಂದರೆ ಸರಿ. ಈ ದಿನ ನನ್ನ ಯಜಮಾನರು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ನನ್ನ ಮಾವ 1 ನೇ ಪ್ರತಿವಾದಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಬೇರೆಯಾಗಿ ವಾಸವಾಗಿರುತ್ತಾರೆ. ಅವರು ತೋಟ ಇರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೆ. ಅದರ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ವಾದಿಯು 1 ನೇ ಪ್ರತಿವಾದಿಯ ವಿರುದ್ಧ ಯಾವ ಆಸ್ತಿಗೆ ಸಂಬಂಧಿಸಿದಂತೆ ಈ ದಾವೆ ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನನ್ನ ಯಜಮಾನರು ಮಾಹಿತಿ ನೀಡಿರುತ್ತಾರೆ. ನನ್ನ ಯಜಮಾನರು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಮೊದಲು ವಾದಿಯು ನನ್ನ ಮಾವ ರಂಗೇಗೌಡರ ವಿರುದ್ಧ ಮಾತ್ರ ಈ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ 1 ನೇ ಪ್ರತಿವಾದಿ ಈ ದಾವೆಯಲ್ಲಿ ಪ್ರತಿವಾದಿ ಪತ್ರ ಸಲ್ಲಿಸಿರುವುದನ್ನು ನಾನು ತಿಳಿದುಕೊಂಡಿರುವುದಿಲ್ಲ. ಈ ದಾವೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ.

ನನ್ನ ಮಾವನವರಿಗೆ ದಾವಆಸ್ತಿಯು ವೆಂಕಟೇಗೌಡರವರಿಂದ ಖರೀದಿ ಮೂಲಕ ಬಂದಿರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ದಾವಆಸ್ತಿಯು ನನ್ನ ಮಾವನವರಿಗೆ ದಿನಾಂಕ 12.8.1986 ರ ಮೌಖಿಕ ವಿಭಾಗದ ಮೂಲಕ ಬಂದಿರುತ್ತದೆ ಎಂದು ನಮೂದಿಸಿದ್ದು, ಯಾವುದು ಸತ್ಯ ಎಂದರೆ ಸಾಕ್ಷಿದಾರರು ಎರಡು ಸತ್ಯವಾಗಿರುತ್ತದೆ ಎನ್ನುವರು. ನಿಪಿ6 ರಲ್ಲಿ ದಾವಆಸ್ತಿಯು ರಂಗೇಗೌಡರಿಗೆ ದರಖಾಸ್ತು ಮೂಲಕ ಬಂದಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಈ ದಾವೆ ತನಿಖೆಗೆ ಬಾಕಿ ಇದ್ದಾಗ 1 ನೇ ಪ್ರತಿವಾದಿ ನನ್ನ ಯಜಮಾನರ ಹೆಸರಿಗೆ ದಾವಆಸ್ತಿಗೆ ಸಂಬಂಧಿಸಿದಂತೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ. ನನ್ನ ಯಜಮಾನರು ಸಹ ದಾವಆಸ್ತಿಗೆ ಸಂಬಂಧಿಸಿದಂತೆ ನನಗೆ ದಾನಪತ್ರ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮಾವನಿಗೆ ದಾವಆಸ್ತಿಯಲ್ಲಿ ಯಾವುದೇ ಹಕ್ಕು ಇರದಿದ್ದರೂ ಸಹ ವಾದಿಯರ ದಾವಆಸ್ತಿಯ ಹಕ್ಕಿಗೆ ತೊಂದರೆ ನೀಡಲು ದಾನಪತ್ರವನ್ನು ನನ್ನ ಯಜಮಾನರ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಆಸ್ತಿಯು ಮೂಲತಃ ಸಣ್ಣಪ್ಪರವರಿಗೆ ಸಂಬಂಧಿಸಿದ ಆಸ್ತಿ ಎಂದರೆ ಸರಿ. ದಾವಆಸ್ತಿಯನ್ನು ಸಣ್ಣಪ್ಪರವರಿಗೆ ದಿನಾಂಕ 10.10.1965 ರಲ್ಲಿ ಸರ್ಕಾರದವರು ದರಖಾಸ್ತು ಮೂಲಕ ಮಂಜೂರು ಮಾಡಿರುವ ಜಮೀನು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಿನದಿಂದಲೂ ಈವರೆವಿಗೂ ಸಣ್ಣಪ್ಪ ರವರು ದಾವಆಸ್ತಿಯ ಮಾಲೀಕರಾಗಿ

ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸಣ್ಣಪ್ಪರವರಿಗೆ ದಾವಆಸ್ತಿಯನ್ನು ವೆಂಕಟೇಗೌಡರಿಗೆ ಮಾರಾಟ ಮಾಡುವ ಪ್ರಮೇಯ ಬಂದಿರುವುದಿಲ್ಲ ಎಂದರೆ ಸಾಕ್ಷಿದಾರರು ಆ ಬಗ್ಗೆ ನನ್ನ ಮಾವನಿಗೆ ಗೊತ್ತಿರುತ್ತದೆ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಆಸ್ತಿಯನ್ನು 15 ವರ್ಷಗಳ ಕಾಲ ಮಾರಾಟ ಮಾಡಬಾರದು ಎಂದು ದರಖಾಸ್ತು ಆದೇಶದಲ್ಲಿ ನಿಬಂಧನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಆಸ್ತಿಯ ಪಕ್ಕದಲ್ಲಿ ನಮಗೆ ಸಂಬಂಧಪಟ್ಟ ಬೇರೆ ಜಮೀನು ಇರುತ್ತದೆ ಎಂದರೆ ಸಾಕ್ಷಿದಾರರು ನನ್ನ ಮಾವನ ಸಹೋದರನ ಮಕ್ಕಳು ಸದರಿ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎನ್ನುವರು. ನನ್ನ ಮಾವನಿಗೆ ಇಬ್ಬರು ಸಹೋದರರು ಮತ್ತು ಒಬ್ಬ ಸಹೋದರಿ ಇರುತ್ತಾರೆ. ವೆಂಕಟೇಗೌಡರ ಮಕ್ಕಳು ಮಾಡಿಕೊಂಡಿರುವ ಪಾಲು ಪಾರಿಕತ್ತನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ದಾವಆಸ್ತಿಯ ಪೈಕಿ 1 ಎಕರೆ ರಸ್ತೆಗೆ ಸ್ವಾಧೀನವಾಗಿರುವ ಬಗ್ಗೆ ದಾಖಲಾತಿ ಇರುತ್ತದಾ ಎಂದರೆ ಸಾಕ್ಷಿದಾರರು ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುವರು. ದಾವಆಸ್ತಿಯು ವಾದಿಗೆ ಸೇರುತ್ತದೆ ಎಂಬ ವಿಚಾರವನ್ನು ತಿಳಿದುಕೊಂಡು ಈ ದಾವೆ ವಿಚಾರಣೆಗೆ ಬಾಕಿ ಇರುವಾಗ ನನ್ನ ಮಾವ ನನ್ನ ಯಜಮಾನರ ಹೆಸರಿಗೆ ದಾವಆಸ್ತಿಗೆ ಸಂಬಂಧಿಸಿದಂತೆ ದಾನಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಅತ್ತೆ ಮಾವ ಮತ್ತು ನಮ್ಮ ನಡುವೆ ಭಿನ್ನಾಭಿಪ್ರಾಯ ಇದ್ದುದರಿಂದ ನಮ್ಮ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಹಣ ಬೇಕಾಗಿದ್ದರಿಂದ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು.

ನನ್ನ ಮಾವನಿಗೆ ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನಾನು 2 ನೇ ಪ್ರತಿವಾದಿಯನ್ನು ಮದುವೆಯಾಗಿ 22 ವರ್ಷವಾಗಿರುತ್ತದೆ. ಕಳೆದ 15 ವರ್ಷದಿಂದ ನನ್ನ ಹಾಗೂ ನನ್ನ ಮಾವನ ನಡುವೆ ಭಿನ್ನಾಭಿಪ್ರಾಯ ಇರುತ್ತದೆ. 15 ವರ್ಷಗಳಿಂದ ಭಿನ್ನಾಭಿಪ್ರಾಯ ಇದ್ದರೇ ಆಗಲೆ ಆಸ್ತಿಯ ದಾನಪತ್ರ ಮಾಡಬಹುದಿತ್ತು ಎಂದರೆ ಸಾಕ್ಷಿದಾರರು ಆಗ ಮಾಡಿಕೊಟ್ಟಿರುವುದಿಲ್ಲ ಎನ್ನುವರು. ನನ್ನ ಯಜಮಾನರಿಗೆ ದಾನಪತ್ರ ಮಾಡಿಕೊಟ್ಟ 1 ತಿಂಗಳ ಒಳಗೆ ನನ್ನ ಹೆಸರಿಗೆ ದಾನಪತ್ರ ಮಾಡಲಾಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ಯಜಮಾನರಿಗೆ ಅರೋಗ್ಯ ಸರಿಯಿರಲಿಲ್ಲ, ಆ ಕಾರಣ ದಾನಪತ್ರ ಮಾಡಿರುತ್ತಾರೆ ಎನ್ನುವರು. ನನ್ನ ಯಜಮಾನರಿಗೆ 3 ವರ್ಷಗಳ ಹಿಂದೆ ಹೊಟ್ಟೆ ನೋವಿಗೆ ಸಂಬಂಧಿಸಿದಂತೆ ಸಿಗ್ಮಾ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಆಗಿರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ದಾವೆ ನಡೆಯುತ್ತಿದ್ದಾಗ ದಿನಾಂಕ 13.8.2019 ರಿಂದ 4.10.2019 ರ ಒಳಗೆ ಮೂರು ದಾಖಲಾತಿಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಕಬಳಿಸಲು ಮೂರು ದಾಖಲಾತಿಗಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಯಜಮಾನರಿಗೆ ಆರೋಗ್ಯ ಸರಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗೆ ಮೋಸ ಮಾಡಲು ದಾವಆಸ್ತಿಯನ್ನು ಪುನಃ ಸೋಮೇಶ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಾರಾಟ ಮಾಡುವ ಪೂರ್ವದಲ್ಲಿ ದಾವಆಸ್ತಿಯನ್ನು ಮಾರಾಟ ಮಾಡಬಾರದು ಎಂದು ನ್ಯಾಯಾಲಯದಿಂದ ತಡೆಯಾಜ್ಞೆ ಇತ್ತು ಎಂದರೆ ಸರಿಯಲ್ಲ. ದಾವಆಸ್ತಿಯನ್ನು ಸೋಮೇಶ

ಎಂಬುವವರಿಗೆ ಮಾರಾಟ ಮಾಡುವ ಮೊದಲು ನಾನು ಮತ್ತು ನನ್ನ ಯಜಮಾನರು ಈ ದಾವೆಯಲ್ಲಿ ವಕೀಲರ ಮೂಲಕ ಹಾಜರಾಗಿದ್ದೆವು ಎಂದರೆ ಸರಿಯಲ್ಲ. ನನ್ನ ಮಾವನವರು ನನ್ನ ಯಜಮಾನರಿಗೆ ಅಥವಾ ನನ್ನ ಯಜಮಾನರು ನನಗೆ ದಾನಪತ್ರ ಮಾಡುವ ಸಮಯದಲ್ಲಿ ಆಸ್ತಿಯ ಮೂಲ ಯಾವುದು ಎಂದು ತಿಳಿದುಕೊಂಡಿರುವುದಿಲ್ಲ. ನನ್ನ ಮಾವನವರು ನನ್ನ ಯಜಮಾನರಿಗೆ ಮಾಡಿಕೊಟ್ಟ ದಾನಪತ್ರ, ನನ್ನ ಯಜಮಾನರು ನನಗೆ ಮಾಡಿಕೊಟ್ಟ ದಾನಪತ್ರ ಹಾಗೂ ನಾನು ಸೋಮೇಶ ಎಂಬುವವರಿಗೆ ಮಾಡಿಕೊಟ್ಟಿರುವ ಕ್ರಯಪತ್ರ ವಾದಿಯ ದಾವಆಸ್ತಿಯ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ವೆಂಕಟೇಗೌಡ ಮತ್ತು ರಂಗೇಗೌಡರು ತಮ್ಮ ಪ್ರಭಾವ ಬಳಸಿ ದಾವಆಸ್ತಿಯ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಆ ಬಗ್ಗೆ ಗೊತ್ತಿರುವುದಿಲ್ಲ ಎನ್ನುವರು. ನಿಡಿ4 ರ ಮೂಲ ಕ್ರಯಪತ್ರ ಯಾರ ಬಳಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮೂಲ ಕ್ರಯಪತ್ರವನ್ನು ನೋಡಿರುತ್ತೀರಾ ಎಂದರೆ ಸಾಕ್ಷಿದಾರರು ನನ್ನ ಯಜಮಾನರು ನನಗೆ ದಾನಪತ್ರ ಮಾಡಿದಾಗ ಮೂಲ ಕ್ರಯಪತ್ರವನ್ನು ನೋಡಿರುತ್ತೇನೆ ಎನ್ನುವರು. ಸದರಿ ಮೂಲ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸಣ್ಣಪ್ಪ ರವರು ವೆಂಕಟೇಗೌಡರಿಗೆ ಯಾವುದೇ ದಾಖಲಾತಿಯನ್ನು ಬರೆದುಕೊಡದಿದ್ದರೂ ಸಹ ದಾಖಲಾತಿಯನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಆಸ್ತಿಯ ಹಿನ್ನಲೆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಹಿಂದೆ ಏನು ಇತ್ತು ಎಂದು ಗೊತ್ತಿರುವುದಿಲ್ಲ ಎನ್ನುವರು. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎಂದು ಅವರು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಅವರು ಆಸ್ತಿಯ ಕೈಬದಲಾವಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಆಸ್ತಿಯು ವಾದಿಗೆ ಸಂಬಂಧಪಟ್ಟಿದ್ದು ಅವರಿಂದ ಸ್ವಾಧೀನವನ್ನು ಕಿತ್ತುಕೊಂಡು ಅವರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.